# ಓದುಗರ ಪ್ರತಿಕ್ರಿಯೆ

## ಕಲಾತ್ಮಕ ಸೃಷ್ಟಿಯೇ ಸರಿ

ವಿವೇಕಪ್ರಭದ ಸಿಬ್ಬಂದಿ ವರ್ಗಕ್ಕೆ ವಿಶೇಷ ಅಭಿನಂದನೆಗಳು ಸಲ್ಲಬೇಕು. ನೀವೆಲ್ಲರೂ ಅತ್ಯುತ್ತಮ ಕಾರ್ಯ ಮಾಡುತ್ತಿದ್ದೀರಿ. ಜನವರಿ ಸಂಚಿಕೆಯ ಮುಖಪುಟ ತುಂಬ ಚೆನ್ನಾಗಿದೆ. ಸಂಪಾದಕೀಯವೂ ಚೆನ್ನಾಗಿವೆ. ಅಸಾಂಪ್ರದಾಯಿಕ ಚಿಂತನೆ ತುಂಬ ಸ್ವಾಗತಾರ್ಹ. ಆದರೆ ಭಾಷೆ ಇನ್ನೂ ಲಲಿತವೂ ಸರಳವೂ ಸಂಭಾಷಣಾ ಶೈಲಿಯದೂ ಆಗಿದ್ದರೆ ಚೆನ್ನಾಗಿತ್ತು ಎಂದು ನನ್ನ ಭಾವನೆ. ಫೆಬ್ರವರಿ ಸಂಚಿಕೆಯಲ್ಲಿ ಚಿತ್ರಗಳು ಅಷ್ಟು ಸ್ಪಷ್ಟವಾಗಿಲ್ಲ... ಫೆಬ್ರವರಿ ಸಂಚಿಕೆಯ 'ಪ್ರಶ್ನೋತ್ತರ'ದಲ್ಲಿ ಉತ್ತರ ನೇರವೂ ಸಂಕ್ಷಿಪ್ತವೂ ಆಗಿದ್ದಿದ್ದರೆ ಚೆನ್ನಾಗಿರುತ್ತಿತ್ತು. ಸ್ವಾಮಿ ಪುರುಷೋತ್ತಮಾನಂದ ಮತ್ತು ಜಗದಾತ್ಮಾನಂದರ ಬರವಣಿಗೆಯ ಶೈಲಿ ತುಂಬ ಚೆನ್ನಾಗಿದೆ. ಇಂತಹ ಪತ್ರಿಕೆಯನ್ನು ಹೊರತರುವುದೆಂದರೆ ಒಂದು ಕಲಾತ್ಮಕ ಸೃಷ್ಟಿಯೇ ಸರಿ. ಅದನ್ನು ಉತ್ತಮ ಪಡಿಸುವಲ್ಲಿ ಮಿತಿಯೆಂಬುದಿಲ್ಲ. ಮಾರ್ಚ್ ಸಂಚಿಕೆಯಲ್ಲಿ ವಿಶೇಷವಾಗಿ ಸಂಪಾದಕೀಯ ನನಗೆ ಹಿಡಿಸಿತು. ಸ್ವಾಮಿ ಸುರೇಶಾನಂದರ ಶಂಕರಾಚಾರ್ಯರ ಮೇಲಿನ ಲೇಖನವೂ ಚೆನ್ನಾಗಿದೆ. 'ಅಹಂ'ಮೇಲಿನ ಲೇಖನವೂ ಚೆನ್ನಾಗಿದೆ.

**—ಸ್ವಾಮಿ ಪ್ರಬುದ್ಧಾನಂದ,**
**ವೇದಾಂತ ಸೊಸೈಟಿಯ ಮುಖ್ಯಸ್ಥರು,**
**ಸ್ಯಾನ್ ಫ್ರಾನ್ಸಿಸ್ಕೋ, ಅಮೆರಿಕ.**

## ಸುಪುಷ್ಟವಾಗಲಿ

ವಿವೇಕಪ್ರಭದ ಪ್ರಥಮ ಸಂಚಿಕೆಯನ್ನು ಪ್ರೀತಿಯಿಂದ ಕಳುಹಿಸಿದ್ದೀರಿ. ಸಂಚಿಕೆಯನ್ನು ನೋಡಿ, ಓದಿ ಸಂತೋಷವಾಯಿತು. ಕಾಲ ಕ್ರಮೇಣ ಅದು ಇನ್ನಷ್ಟು ಸುಪುಷ್ಟವಾಗುತ್ತದೆ, ಸುಂದರವಾಗುತ್ತದೆ ಎಂದು ನಂಬಿದ್ದೇನೆ. **—ಪ್ರೊ|| ಎಮ್. ರಾಮಚಂದ್ರ,**
**ಖ್ಯಾತ ಲೇಖಕರು, ಕಾರ್ಕಳ**

## ವಿಚಾರಪೂರ್ಣ, ಆಕರ್ಷಕ

ರಾಮಕೃಷ್ಣ ಮಹಾಸಂಘದ ಮೈಸೂರು ಕೇಂದ್ರದಿಂದ ಪ್ರಕಟವಾಗುತ್ತಿರುವ ವಿವೇಕಪ್ರಭ ಮಾಸಪತ್ರಿಕೆಯು ಬಹಳ ಸುಂದರವಾಗಿ ಮೂಡಿಬರುತ್ತಿದೆ. ಲೇಖನಗಳು ಸರಳವಾಗಿದ್ದರೂ ವಿಚಾರಪೂರ್ಣವಾಗಿವೆ. ಮುಖಪುಟದ ವಿನ್ಯಾಸವೂ ಕೂಡ ತುಂಬಾ ಆಕರ್ಷಕವಾಗಿದೆ. ಪತ್ರಿಕೆಯು ಮತ್ತಷ್ಟು ಉತ್ತಮಗೊಂಡು ಧರ್ಮಪ್ರಚಾರದ ಕಾರ್ಯದಲ್ಲಿ ಉನ್ನತಿಯನ್ನೂ ಪ್ರಗತಿಯನ್ನೂ ಸಾಧಿಸಲಿ.

**—ಸ್ವಾಮಿ ಹರ್ಷಾನಂದ,**
**ಅಧ್ಯಕ್ಷರು, ಶ್ರೀರಾಮಕೃಷ್ಣ ಮಠ, ಬೆಂಗಳೂರು.**

## ಬೋಧಪ್ರದ

ವಿಚಾರವನ್ನು ಕೆರಳಿಸುವ ನಿಮ್ಮ 'ವಿವೇಕಪ್ರಭ' ಪತ್ರಿಕೆಯ ಪ್ರಥಮ ಸಂಚಿಕೆಯನ್ನು ನೋಡಿ ನನಗೆ ಅತ್ಯಂತ ಸಂತೋಷವಾಯಿತು. ಅನೇಕರ ಒಟ್ಟು ಸಹಕಾರದಿಂದ ಪತ್ರಿಕೆ ಅತ್ಯುತ್ತಮವಾಗಿ ಮೂಡಿಬಂದಿದೆ. ಪ್ರತಿಯೊಂದು ಲೇಖನವೂ ಬೋಧಪ್ರದವಾಗಿದೆ. ಈ ಪತ್ರಿಕೆಗೆ ಉತ್ತಮ ಯಶಸ್ಸನ್ನು ನಾನು ಬಯಸುತ್ತೇನೆ ಮತ್ತು ಇದು ಬೇಗನೆ ಜನಪ್ರಿಯವಾಗಿ ಅಧಿಕ ಸಂಖ್ಯೆಯ ಓದುಗರನ್ನು ಪಡೆಯುತ್ತದೆ ಎಂದು ಆಶಿಸುತ್ತೇನೆ. **—ಪಿ. ಸತೀಶ್ ಮಲ್ಯ,**
**ಲೇಖಕರು ಹಾಗೂ ಪತ್ರಕರ್ತರು, ಮಣಿಪಾಲ**

## ರಾಮಕೃಷ್ಣ ಮಹಾಸಂಘದ ಒಳನೋಟ ದೊರೆಯುತ್ತದೆ

ಪತ್ರಿಕೆ ಅಚ್ಚುಕಟ್ಟಾಗಿ, ಆಕರ್ಷಕವಾಗಿ ಪ್ರಕಟಗೊಂಡಿದೆ. ಸಂಪಾದಕೀಯ, ಲೇಖನಗಳು ಚೆನ್ನಾಗಿವೆ. 'ಉತ್ತಮ ಜೀವನದ ಹತ್ತು ಸೂತ್ರಗಳು' ಅತ್ಯಂತ ಉಪಯೋಗಿ ಅಂಶಗಳನ್ನು ಅನಾವರಣಗೊಳಿಸುತ್ತದೆ. ಇಂಥ ಲೇಖನ ಪ್ರತಿ ಸಂಚಿಕೆಯಲ್ಲೂ ಇರಲೆಂಬುದು ನನ್ನ ಅಪೇಕ್ಷೆ (ಓದುಗರ ಪರವಾಗಿ!) ಸ್ವಾಮಿ ರಾಘವೇಶಾನಂದಜಿ ಅವರ 'ಮಾಮನುಸ್ಮರ.....' ಲೇಖನ ನನಗೆ ಬಹಳ ಪ್ರಿಯವಾಯಿತು. ಇದುವರೆಗೆ ಪ್ರಕಟಗೊಂಡಿರುವ ರಾಮಕೃಷ್ಣ-ಮಾ-ವಿವೇಕಾನಂದರ ಚಿಂತನೆಗಳ ಸಜೀವ ಭಾಷ್ಯ ರಾಮಕೃಷ್ಣ ಮಹಾಸಂಘ. ಈ ನಮ್ಮ ನಂಬಿಕೆಯನ್ನು ಬಲಪಡಿಸುವ, ಸಾರ್ವಜನಿಕ ದೃಷ್ಟಿಗೆ ಗೋಚರಿಸದ ಮಹಾಸಂಘದ ಒಳನೋಟ ಇಂತಹ ಲೇಖನಗಳಿಂದ ದೊರೆಯುತ್ತದೆ—**ರಘು, ಸಂಪಾದಕರು 'ವಿವೇಕ ಹಂಸ', ಬೆಂಗಳೂರು.**

## ವೈವಿಧ್ಯಮಯ

ವಿವೇಕಪ್ರಭದ ಮೊದಲನೆಯ ಸಂಚಿಕೆ ಅದ್ಭುತವಾಗಿದೆ. ಮುಖಪುಟ ಆಕರ್ಷಕವಾಗಿದೆ ಮತ್ತು ಸದಭಿರುಚಿಯಿಂದ ಕೂಡಿದೆ. ಒಳಗಿನ ವಿನ್ಯಾಸಗಳೂ ಸುಂದರವಾಗಿವೆ. ಲೇಖನಗಳೂ ವೈವಿಧ್ಯಮಯವಾಗಿವೆ. ಪತ್ರಿಕೆ ಒಳ್ಳೆಯ ಯಶಸ್ಸನ್ನು ಪಡೆಯುವುದೆಂಬುದರಲ್ಲಿ ಸಂದೇಹವಿಲ್ಲ... ವಿವೇಕಪ್ರಭವು ಕನ್ನಡ ಸಾಹಿತ್ಯದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಪಡೆಯುವುದರಲ್ಲಿ ಸಂದೇಹವಿಲ್ಲ.

**—ಸ್ವಾಮಿ ತ್ಯಾಗಾನಂದ,**
**ರಾಮಕೃಷ್ಣ ಮಠದ ಇಂಗ್ಲಿಷ್ ಮಾಸಿಕ 'ವೇದಾಂತಕೇಸರಿ'**
**ಪತ್ರಿಕೆಯ ಹಿಂದಿನ ಸಂಪಾದಕರು.**

## ಸಾಧಿಸುವುದು ಅಷ್ಟು ಸುಲಭವಲ್ಲ

ನಾನು ವಿವೇಕಪ್ರಭದ ಮೊದಲ ಸಂಚಿಕೆಯನ್ನು ನೋಡಿದೆ. ಅದರ ಹಿಂದೆ ನಡೆಯುತ್ತಿರುವ ಕೆಲಸದ ಮೊತ್ತವನ್ನು ನಾನು ಕಲ್ಪಿಸಿಕೊಳ್ಳಬಲ್ಲೆ. ನೀವೆಲ್ಲ ಸೇರಿ ಏನನ್ನು ಸಾಧಿಸಿರುವಿರೊ ಅದನ್ನು ಸಾಧಿಸುವುದು ಅಷ್ಟು ಸುಲಭವಲ್ಲ.

ಫೆಬ್ರವರಿ ಸಂಚಿಕೆಯ ಸಂಪಾದಕೀಯ ತುಂಬ ಚೆನ್ನಾಗಿದೆ. ಅಕ್ಷರಗಳು ಇನ್ನೂ ದೊಡ್ಡದಾಗಿದ್ದರೆ ಚೆನ್ನಾಗಿರುತ್ತದೆ. ಓದುವಾಗ ಕಣ್ಣಿಗೆ ಹಿಂಸೆಯಾಗಬಾರದು. ಸ್ವಾಮಿ ಜಗದಾತ್ಮಾನಂದಜಿಯವರ ಸಿಂಗಪುರದ ಮೇಲಿನ ಲೇಖನದಂತಹವುಗಳನ್ನು ಪ್ರಕಟಿಸುವುದು ಒಳ್ಳೆಯದು. ವಿಷಯ ಬದಲಾವಣೆ ಚೆನ್ನಾಗಿರುತ್ತದೆ.

ವರ್ಣವಿನ್ಯಾಸ ಕೆಲವೆಡೆ ಅಷ್ಟು ಚೆನ್ನಾಗಿಲ್ಲ. ಕೆಲವು ಕಡೆ ಅಕ್ಷರಗಳು ಸರಿಯಾಗಿ ಕಾಣುವುದಿಲ್ಲ. ಪ್ರಶ್ನೋತ್ತರ ಪ್ರತಿಭಾಪೂರ್ಣವಾಗಿದೆ. ಒಟ್ಟಿನಲ್ಲಿ ಪತ್ರಿಕೆ ಅತ್ಯಂತ ಚೆನ್ನಾಗಿದೆ.

ಜುಲೈ ಸಂಚಿಕೆಯ ಪುಟ.೩೮ರಲ್ಲಿರುವ 'ಅಮೆರಿಕದಲ್ಲಿ ಭಾರ

ತೀಯರು' ಎಂಬ ವಾರ್ತಾ ವಿಶ್ಲೇಷಣೆ ತೀರ ಉತ್ಪ್ರೇಕ್ಷಿತವಾಗಿದೆ ಮತ್ತು ಸತ್ಯದೂರವಾಗಿದೆ. ಇಂಟರ್‌ನೆಟ್‌ನಲ್ಲಿ ಬರುವ ಮಾಹಿತಿಗಳನ್ನೂ, ಪ್ರತಿಷ್ಠಿತವಲ್ಲದ ಪತ್ರಿಕೆಯಲ್ಲಿ ಪ್ರಕಟವಾದ ವಿಷಯಗಳನ್ನೂ ಅಷ್ಟು ನೆಚ್ಚಿಕೊಳ್ಳಬೇಡಿ. —ರಾಧಾಕೃಷ್ಣ,

ಲಾಸ್ ಅಲಾಮಿಟೋಸ್, ಅಮೆರಿಕ

### ಸುಂದರ ಡಿಸೈನ್

ಮುಖಪುಟದ ಗ್ರಾಫಿಕ್ಸ್ ಹಾಗೂ ಬಣ್ಣಗಳ ಬಳಕೆ ತುಂಬಾ ಸುಂದರವಾಗಿ ಮಾಡಲ್ಪಟ್ಟಿದೆ. 'ರಾಮಕೃಷ್ಣ ಮಹಾಸಂಘದ ಮಾಸ ಪತ್ರಿಕೆ' ಎಂಬುದನ್ನು 'ರಾಮಕೃಷ್ಣ ಮಹಾಸಂಘದ ಕನ್ನಡ ಮಾಸ ಪತ್ರಿಕೆ' ಎಂದು ಬದಲಾಯಿಸಿದರೆ ಕನ್ನಡ ಭಕ್ತರಿಗೆಲ್ಲಾ ಹೆಮ್ಮೆಯಾಗಬಹುದು. ಒಳಪುಟಗಳ ಡಿಸೈನ್ ಸುಂದರವಾಗಿದೆ. ಬಾಕ್ಸ್‌ಗಳನ್ನು ಹಾಕಿದ ಕ್ರಮವೂ ಚೆನ್ನಾಗಿದೆ.... ಸಂಪಾದಕೀಯದಲ್ಲಿ ವ್ಯಕ್ತವಾಗಿರುವ ಚಿಂತನ ಧಾರೆಯಂತೂ ತುಂಬ ಮನೋಜ್ಞವಾಗಿದ್ದು ಸಂಪಾದಕರು ಸಾಧನೆಯ ಹಾದಿಯಲ್ಲಿ ಸಾಗಿಬಂದಿರುವ ಔನ್ನತ್ಯದ ದ್ಯೋತಕವಾಗಿದೆ. ಚಿಂತನೆ ನೂರಕ್ಕೆ ನೂರು 'ಒರಿಜಿನಲ್' ಆಗಿದ್ದು ತನ್ನ 'ನಾವೆಲ್ಲಿ'ಯಿಂದ ಎಲ್ಲರನ್ನೂ ಖಂಡಿತ ಆಕರ್ಷಿಸುತ್ತದೆ.

—ಡಾ. ಹೆಚ್. ರಾಮಚಂದ್ರಸ್ವಾಮಿ, ಶೃಂಗೇರಿ

### ಅರಳಿ ಬೆಳಗುವ ಲಕ್ಷಣಗಳನ್ನು ಹೊಂದಿದೆ

ಸಾದರ ಪ್ರಣಾಮಗಳು. ವಿವೇಕಪ್ರಭದ ಮೊದಲ ಸಂಚಿಕೆ ತಲುಪಿದೆ. ತುಂಬ ಮುದವಾಯಿತು. ಸಂಚಿಕೆಯು ಸುಂದರವಾಗಿ ಮೂಡಿ ಬಂದಿರುತ್ತದೆ ಎಂದು ತಿಳಿಸಲು ಹರ್ಷಿಸುತ್ತೇನೆ. ಪತ್ರಿಕೆಯು ಎಲ್ಲ ದೃಷ್ಟಿಯಿಂದಲೂ ಅರಳಿ ಚೆನ್ನಾಗಿ ಬೆಳಗುವ ಲಕ್ಷಣಗಳನ್ನು ಹೊಂದಿರುವುದನ್ನು ಕಂಡು ವಿಶೇಷವಾಗಿ ಸಂತೃಪ್ತನಾಗಿದ್ದೇನೆ. ಈ ಸಂದರ್ಭದಲ್ಲಿ ನಿಮ್ಮನ್ನು ಗೌರವಪೂರ್ವಕವಾಗಿ ಅಭಿನಂದಿಸುತ್ತೇನೆ. ಶ್ರೀಗುರುಮಹಾರಾಜರ ಕೃಪೆಯಿಂದ ಪತ್ರಿಕೆಯ ಯೋಜನೆ ಯಶಸ್ವಿಯಾಗಿ ನೆರವೇರಿದೆ. ಮುಂದಿನ್ನು ಅವರ ಅನುಗ್ರಹದಿಂದ ಪತ್ರಿಕೆಯು ಚೆನ್ನಾಗಿ ಬೆಳೆದು ಉತ್ತರೋತ್ತರವಾಗಿ ಬೆಳಗಲಿದೆ ಎಂಬುದು ನನ್ನ ನಂಬಿಕೆಯಾಗಿದೆ.— ಎ.ಕೆ.ಶಂಕರನಾರಾಯಣ ಭಟ್,

ಖ್ಯಾತ ಲೇಖಕರು,ಭಾಗಮಂಡಲ.

### ವಿಚಾರ ಪ್ರಚೋದಕ ಮತ್ತು ಮನರಂಜನಾತ್ಮಕ

ವಿವೇಕಪ್ರಭದ ಮೊದಲನೆಯ ಸಂಚಿಕೆ ನಮಗೆ ತಲುಪಿತು. ತುಂಬ ಸುಂದರವಾಗಿದೆ. ವಿಚಾರವನ್ನು ಕೆರಳಿಸುವ ಹಾಗೂ ಮನರಂಜನಾತ್ಮಕ ಲೇಖನಗಳು ಅದರಲ್ಲಿವೆ. ಮುಖಪುಟ, ದ್ವಿವರ್ಣ ಮುದ್ರಣ ಎಲ್ಲ ಚೆನ್ನಾಗಿವೆ. —ಸ್ವಾಮಿ ಸುನಿರ್ಮಲಾನಂದ,

ಸಂಪಾದಕರು, 'ಪ್ರಬುದ್ಧಭಾರತ', ಮಾಯಾವತಿ

### ಉದಾತ್ತ ಭಾವನೆಗಳು

ರಾಮಕೃಷ್ಣ ಮಹಾಸಂಘದ ಕನ್ನಡ ಮಾಸಪತ್ರಿಕೆ ವಿವೇಕಪ್ರಭವನ್ನು ಕಳಿಸಿದ್ದಕ್ಕಾಗಿ ತುಂಬ ಧನ್ಯವಾದಗಳು. ಪತ್ರಿಕೆ ಅತ್ಯಂತ ಬೋಧಪ್ರದವಾಗಿದೆ ಮತ್ತು ನಮ್ಮ ಸಂಸ್ಕೃತಿ ಹಾಗೂ ಆಧ್ಯಾತ್ಮಿಕತೆಯ ಉದಾತ್ತ ಭಾವನೆಗಳಿಂದ ತುಂಬಿದೆ. —ಹೆಚ್. ವಿ. ಕಾಮತ್,

ಕಾರ್ಯದರ್ಶಿ, ಟಿ.ಎಂ.ಎ. ಪೈ ಫೌಂಡೇಷನ್

### ಉತ್ಸಾಹದಿಂದಲೆ ಓದಿದೆವು

ಪತ್ರಿಕೆಯ ಮುಖಪುಟದಿಂದ ಹಿಡಿದು ಎಲ್ಲಾ ಭಾಗಗಳು ತುಂಬಾ ಚೆನ್ನಾಗಿವೆ. ಸಂಪಾದಕೀಯ, ನಾಲ್ಕು ಲೇಖನಗಳು, ಯುವಜನರಿಗೆ ಬೇಕಾದ ಪ್ರಚೋದನೆ, ಚಿಕ್ಕ ಕಥೆಗಳು ಎಲ್ಲವೂ ಸುಂದರವಾಗಿವೆ. ಅಂತೂ ಈ ಕನ್ನಡ ಪತ್ರಿಕೆಯನ್ನು ತುಂಬಾ ಉತ್ಸಾಹದಿಂದಲೆ ಓದಿದೆವು. ವಿವೇಕಪ್ರಭ ಪತ್ರಿಕೆಯು ಯಶಸ್ವಿಯಾಗಿ ನಡೆಯಲೆಂದು ಶ್ರೀಗುರುಮಹಾರಾಜ್, ಶ್ರೀಮಾತೆ ಹಾಗೂ ಸ್ವಾಮೀಜಿಯವರಲ್ಲಿ ನಾನು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

— ಪ್ರವ್ರಾಜಿಕಾ ಧರ್ಮಪ್ರಾಣಾ, ಶಾರದಾಮಠ, ತ್ರಿಶೂರು

### ಅನ್ಯ ವಿಚಾರಗಳನ್ನೂ ಶ್ರೀರಾಮಕೃಷ್ಣರ, ವಿವೇಕಾನಂದರ ವಿಚಾರಗಳೊಂದಿಗೆ ನೇರವಾಗಿ ಸಮನ್ವಯಿಸಿ ತೋರಿಸಿ

ವಿವೇಕಪ್ರಭದ ಲೇಖನಗಳನ್ನು ಓದಿ ಸಂತೋಷ ಪಡುತ್ತಿರುವೆ. ನಿಮ್ಮ ಸಂಪಾದಕೀಯ ಲೇಖನವು ಚಿಂತನಪ್ರದವಾದ ವಿಷಯಗಳಿಂದ ತುಂಬಿ ಚೆನ್ನಾಗಿರುತ್ತದೆ. ಇಡೀ ಪತ್ರಿಕೆಯಲ್ಲಿ ಒಟ್ಟಾರೆ ಎಲ್ಲಾ ಚೆನ್ನಾಗಿದೆ. ಆದರೆ ಶ್ರೀರಾಮಕೃಷ್ಣರ ಬೋಧನೆಗಳು ಅವರ ಜೀವನವಿಶೇಷಗಳು ಬಹಳ ವಿರಳವಾಗಿ ಕಂಡುಬರುತ್ತಿವೆ. ಅವುಗಳಿಗೆ ಇನ್ನೂ ಹೆಚ್ಚಿನ ಸ್ಥಳಾವಕಾಶವನ್ನು ಮಾಡಿ ಶ್ರೀರಾಮಕೃಷ್ಣರ ವಿಷಯಗಳಿಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಟ್ಟು, ಅನ್ಯವಿಚಾರಗಳನ್ನು ಬರೆದಾಗಲೂ ಅವನ್ನು ಆದಷ್ಟು ಹೆಚ್ಚು ಶ್ರೀರಾಮಕೃಷ್ಣರ, ವಿವೇಕಾನಂದರ ವಿಚಾರಗಳೊಂದಿಗೆ ನೇರವಾಗಿ ಸಮನ್ವಯಿಸಿ ತೋರಿಸುತ್ತಿದ್ದರೆ ಚೆನ್ನಾಗಿರುತ್ತದೆಂದು ನನಗನಿಸುತ್ತದೆ. —ಹೆಚ್. ಜಯಲಕ್ಷ್ಮಿ,ಶಿಕ್ಷಕಿ,

ದಾವಣಗೆರೆ.

### ಬಾಳ ಜ್ಯೋತಿಯನ್ನು ಬೆಳಗುವ ಪತ್ರಿಕೆಯಾಗಿ ವಿಶ್ವಮಾನ್ಯವಾಗಲಿ

ವಿವೇಕಪ್ರಭ ಪ್ರಪ್ರಥಮ ಸಂಚಿಕೆ ಅತ್ಯುತ್ತಮ ಲೇಖನಗಳಿಂದ ಕೂಡಿದ್ದು ನಮ್ಮೆಲ್ಲರ ಕೈಸೇರಿದೆ. ಬರುವ ದಿನಗಳಲ್ಲಿ ಇದು ಒಂದು ಪರಿಪೂರ್ಣ ಹಾಗೂ ಪ್ರತಿಯೊಂದು ಮನೆಯ ಮಾಸಪತ್ರಿಕೆಯಾಗುವುದರಲ್ಲಿ ಸಂಶಯವಿಲ್ಲ.

ಚೊಚ್ಚಲ ಸಂಪಾದಕೀಯ —'ಒಂದು ಹಿನ್ನೋಟ' ನಿಜವಾಗಿಯೂ ನಮ್ಮ ಕಣ್ಣು ತೆರೆಸಿದೆ. ಇನ್ನು ಶ್ರೀರಾಮಕೃಷ್ಣ ಮಹಾಸಂಘಕ್ಕೆ ದೊರೆತ ಗಾಂಧೀ ಶಾಂತಿ ಪ್ರಶಸ್ತಿ ದೊರೆತ ಲೇಖನ ಓದಿದಾಗ ಈ ಸಂಘಕ್ಕೆ ನೊಬೆಲ್ ಶಾಂತಿ ಪುರಸ್ಕಾರವೂ ದೊರೆಯುವಂತಾಗಲಿ ಎಂದೆನಿಸಿತು. ಇದಲ್ಲದೇ ಯುವವೇದಿಕೆ, ಕಥೋಪದೇಶ, ಸ್ವಾಮಿ ಹರ್ಷಾನಂದರ ಲೇಖನ ಹಾಗೂ ಇತರರ ಮಹಾ ಮಹಾ ಮೇಧಾವಿಗಳ ಲೇಖನಗಳು ನಮಗೆ ಉತ್ತಮ ಮಾರ್ಗದರ್ಶನ ನೀಡುವಂತಹವು.

ಇನ್ನು ಮುಂದೆಯೂ ವಿವೇಕಪ್ರಭ ಪತ್ರಿಕೆಯು ನಮ್ಮೆಲ್ಲರ ಬಾಳ ಜ್ಯೋತಿಯನ್ನು ಬೆಳಗುವಂತಹ ಪತ್ರಿಕೆಯಾಗಿ ವಿಶ್ವಮಾನ್ಯವಾಗಲಿ ಎಂದು ಆಶಿಸುತ್ತೇನೆ. —ಜಿ.ಎಸ್. ಗಣೇಶ, ಮೈಸೂರು.

### ವಿಷಯಗಳು ಪರಿಣಾಮಕಾರಿಯಾಗಿದ್ದವು

ನೀವು ಪ್ರಕಟಿಸಿ ಹೊರಡಿಸಿದ ಈ ವಿವೇಕಪ್ರಭ ಮಾಸಪತ್ರಿಕೆಯ

ಪ್ರಥಮ ಸಂಚಿಕೆಯನ್ನು ನಾನು ಓದಿದ್ದೇನೆ. ಅದರಲ್ಲಿಯ ಈ ಕೆಲವು ವಿಷಯಗಳು ತುಂಬಾ ಪರಿಣಾಮಕಾರಿಯಾಗಿದ್ದವು. ಅವುಗಳೆಂದರೆ ಸ್ವಾಮಿ ಹರ್ಷಾನಂದರು ಬರೆದ 'ಆಧುನಿಕ ಹಿಂದೂ ಸಮಾಜ ಮತ್ತು ಹಿಂದೂ ಧರ್ಮ' ಲೇಖನದಲ್ಲಿ ಸಿನಿಮಾ, ಲಂಚ, ಮದ್ಯಪಾನ ಇವುಗಳ ಬಗ್ಗೆ, ಡಾ|| ಪ್ರಭುಶಂಕರ ಬರೆದ 'ದೇವಿಯೋ ಮಾನವಿಯೋ ಲೇಖನ' , ಸ್ವಾಮಿ ರಾಘವೇಶಾನಂದರು ಬರೆದ 'ಮಾಮನುಸ್ಮರ ಯುದ್ಧ್ಯಚ' ಲೇಖನ, ಸ್ವಾಮಿ ಪುರುಷೋತ್ತಮಾನಂದರು ಬರೆದ 'ಆಯಸ್ಕಾಂತೀಯ ಯುವಶಕ್ತಿ' ಇವು ನನ್ನ ಮನಸ್ಸಿಗೆ ತುಂಬಾ ಪರಿಣಾಮ ಬೀರಿವೆ. ಅದರಂತೆ ಈ ಪತ್ರಿಕೆಯ ಧ್ಯೇಯವೂ ಅಷ್ಟೇ ಉದಾತ್ತವಾಗಿದೆ. ನಿಜಕ್ಕೂ ಈ ಪತ್ರಿಕೆ ಹಿಂದೂ ಸಮಾಜವನ್ನೇ ಉದ್ಧಾರಮಾಡುತ್ತದೆ. ಇಂಥ ಪತ್ರಿಕೆ ಹೊರಡಿಸಿದ ನಿಮ್ಮೆಲ್ಲರಿಗೆ ನಾನು ಸದಾ ಋಣಿ. **—ಆರ್. ಎ. ಕಾಗಲ್, ಜನಾಪುರ,ಬೆಳಗಾಂ**

## ತಲೆಯಲ್ಲಿನ ಕಸ ತೆಗೆದು......

ನಮ್ಮ ಸನಾತನ ಹಿಂದೂ ಧರ್ಮದ ಪುನಃಶ್ಚೇತನ ತಮ್ಮ ಸಂಸ್ಥೆಯಿಂದ ಆಗಿರುವುದು. ಈಗ ಪತ್ರಿಕೆಯ ಮೂಲಕ ನಮ್ಮ ತಲೆಯಲ್ಲಿನ ಕಸ ತೆಗೆದು ಒಳ್ಳೆಯ ಬುದ್ಧಿಯನ್ನು ತುಂಬಬಹುದು. ಇದು ತಡವಾಗಿ ಬಂದಿದೆ. ಪರವಾಗಿಲ್ಲ. ಇದರಲ್ಲಿ ಕತೆ, ಘಟನೆ ಮುಂತಾದುವು ಅಂದವಾದ ಮುದ್ರಣದಿಂದ ಕೂಡಿವೆ. ಮೊದಲ ಹಂತದಲ್ಲಿ ಓದುಗರ ಮೆಚ್ಚುಗೆ ಗಳಿಸಿದೆ. ನಾಸ್ತಿಕನನ್ನೂ ಆಸ್ತಿಕನನ್ನಾಗಿ ಪರಿವರ್ತನೆ ಮಾಡಬಹುದು. ಈ ಪತ್ರಿಕೆಗೆ ಶ್ರೀರಾಮಕೃಷ್ಣರ ಕೃಪಾಶೀರ್ವಾದ ಇದೆ. ... ಸಾವಿರಾರು ಜನರು ಚಂದಾದಾರರಾಗಲಿ, ಮಕ್ಕಳಲ್ಲಿ ಉಜ್ವಲ ಭವಿಷ್ಯವನ್ನು ರೂಪಿಸಲಿ ಎಂದು ಕೋರುತ್ತೇನೆ. ಈ ಪತ್ರಿಕೆಯಲ್ಲಿ ಶ್ರಮಪಟ್ಟ ಎಲ್ಲರಿಗೂ ನನ್ನ ಧನ್ಯವಾದಗಳು.

**—ಎಸ್.ಆರ್. ಕೃಷ್ಣಮೂರ್ತಿ, ಶಿರಾ**

## ಬಣ್ಣದ ಅಕ್ಷರಗಳು ಕಣ್ಣಿಗೆ ಹಿತವೆನಿಸುವುದಿಲ್ಲ

ಉತ್ತಮ ಶೀರ್ಷಿಕೆಗಳನ್ನೊಳಗೊಂಡು ಕಡಿಮೆ ಬೆಲೆಗೆ ಲಭ್ಯವಾಗುತ್ತಿರುವ ವಿವೇಕಪ್ರಭ ಮಾಸಪತ್ರಿಕೆಯು ಸಾಮಾನ್ಯ ಕನ್ನಡಿಗರ ಬುದ್ಧಿ-ಮನಸ್ಸುಗಳಲ್ಲಿ ಉದಾತ್ತ ಚಿಂತನೆ-ಭಾವನೆಗಳನ್ನು ಬಿತ್ತರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಲೇಖನಗಳ ಸರಳ ಭಾಷೆ ಮೆಚ್ಚುಗೆಯಾಗಿದೆ. ಮುದ್ರಣವು ಚೊಕ್ಕವಾಗಿದ್ದರೂ ಬಣ್ಣದ ಹಿನ್ನೆಲೆ/ಬಣ್ಣದ ಅಕ್ಷರಗಳು ಕಣ್ಣಿಗೆ ಹಿತವೆನಿಸುವುದಿಲ್ಲ—ಹಳದಿ ಅಕ್ಷರಗಳನ್ನು ಓದಲೂ ಕಷ್ಟವೆ. **—ಕುಮಾರಿ ಪಿ.ಉಷಾ,ಬೆಂಗಳೂರು.**

## ಪ್ರೌಢ, ಸ್ವಾರಸ್ಯಕರ

ವಿವೇಕಪ್ರಭ ಸಂಚಿಕೆಯಿಂದ ಸಂಚಿಕೆಗೆ ಉತ್ತಮಗೊಳ್ಳುತ್ತ ಬರುತ್ತಿದೆ. ಲೇಖನಗಳು ಪ್ರೌಢವೂ ಸ್ವಾರಸ್ಯಕರವೂ, ಆಧುನಿಕ ಮನುಷ್ಯರ ಸಮಸ್ಯೆಗಳಿಗೆ ಸ್ಪಂದಿಸುವಂಥವೂ ಆಗಿವೆ. ಮಾರ್ಚ್ ಸಂಚಿಕೆಯ 'ಶಂಕರಾಚಾರ್ಯರ ಭಕ್ತಿಭಾವ' 'ವಾರ್ತಾ ವಿಶ್ಲೇಷಣೆ' ತುಂಬಾ ಚೆನ್ನಾಗಿದ್ದವು. ಇತರ ಲೇಖನಗಳೂ, ಸಂಪಾದಕೀಯವೂ ಉನ್ನತ ಮಟ್ಟದಲ್ಲಿವೆ. ಮೇ ಸಂಚಿಕೆಯ ಸಂಪಾದಕೀಯ 'ಯಜ್ಞದೃಷ್ಟಿ' ಅತ್ಯುತ್ತಮವಾಗಿದೆ. ಪರಿಸರವನ್ನು ಶುದ್ಧವಾಗಿರಿಸುವುದೇ ಇಂದು ನಾವು ಮಾಡಬೇಕಾದ ಯಜ್ಞ ಎಂಬ ನಿಮ್ಮ ವಿಚಾರ ಅತ್ಯಂತ ಮೌಲಿಕ ಹಾಗೂ ಅರ್ಥಪೂರ್ಣ. ಜಿ.ಎಸ್.ಎಸ್‌ರವರ 'ಮಹಾಮಾನವತಾವಾದಿ ವಿವೇಕಾನಂದ' 'ವಿವೇಕಾನಂದರು ಬಯಸಿದ ಯುವಶಕ್ತಿ' ಲೇಖನಗಳು ಉತ್ತಮವಾಗಿವೆ. ಅಭಿನಂದನೆಗಳು.

**—ಬಿ.ವಿ.ಕೆದಿಲಾಯ, ಬೆಂಗಳೂರು.**

## ಕಸದ ಬುಟ್ಟಿಯನ್ನು ಸೇರಿದೆ.

ನಿಮ್ಮ ಈ ವಿಷಯಗಳ ಬಗ್ಗೆ ಈಗ ನನಗೆ ಆಸಕ್ತಿಯಿಲ್ಲದಿರುವುದರಿಂದ ನಿಮ್ಮ ವಿವೇಕಪ್ರಭದ ಜನವರಿ ೨೦೦೦ ತಿಂಗಳ ಸಂಚಿಕೆ ನೇರವಾಗಿ ಕಸದ ಬುಟ್ಟಿಯನ್ನು ಸೇರಿದೆ. ಇನ್ನು ಮುಂದೆ ಹೀಗಾಗುವುದನ್ನು ತಪ್ಪಿಸಲು ದಯವಿಟ್ಟು ನನ್ನ ಈ ನಿಮ್ಮ ಪತ್ರಿಕೆಯ ಸದಸ್ಯತ್ವವನ್ನು (L 148) ರದ್ದುಪಡಿಸಿ**—ವಿರೂಪಾಕ್ಷ ಪಿ., ಬೆಂಗಳೂರು.**

## ಪರಿಪೂರ್ಣತೆಯತ್ತ ಒಯ್ಯುವಲ್ಲಿ ಸಫಲವಾಗಲಿದೆ

ಶ್ರೀರಾಮಕೃಷ್ಣ ಆಶ್ರಮದ ಮೂಲಕ ಹೊರಬರುತ್ತಿರುವ ಪತ್ರಿಕೆ ವಿವೇಕಪ್ರಭ ತನ್ನ ಆರಂಭಿಕ ಮೂರು ಸಂಚಿಕೆಗಳಲ್ಲಿಯೂ ಅತ್ಯುತ್ತಮವಾಗಿ ಹೊರಹೊಮ್ಮಿದ್ದು, ಲೌಕಿಕ, ಆಧ್ಯಾತ್ಮಿಕ ಮತ್ತು ಪಾರಮಾರ್ಥಿಕ ವಿಚಾರಗಳ ಸತ್ವಯುತ ಲೇಖನಗಳೊಂದಿಗೆ ಬೋಧಪ್ರದವಾಗಿದ್ದು, ಓದುಗರನ್ನು ಪರಿಪೂರ್ಣತೆಯತ್ತ ಒಯ್ಯುವಲ್ಲಿ ಸಫಲವಾಗಲಿದೆ ಎಂಬುದು ನನ್ನ ಪ್ರಾಮಾಣಿಕ ಅನಿಸಿಕೆ. ನಿಮ್ಮ ಪತ್ರಿಕೆ ತನ್ನ ದಿವ್ಯಪ್ರಭೆಯನ್ನು ಎಲ್ಲೆಡೆ ಪಸರಿಸಲಿ, ನಿಮ್ಮ ಪತ್ರಿಕೆಯ ಉದ್ದೇಶ ಸಫಲವಾಗಲಿ ಎಂದು ಹಾರೈಕೆ.

**—ಹಳೇಕೋಟೆ ಎಸ್.ರಮೇಶ್, ಮೂಡಿಗೆರೆ**

## ಓದುವುದೇ ಒಂದು ಸಂತೋಷದ ಅನುಭವ

'ವಿವೇಕಪ್ರಭೆ'ಯು ನಿಜಕ್ಕೂ ವಿವೇಕದ ಭವ್ಯಪ್ರಭೆಯಿಂದ ಕೂಡಿದ್ದು ಅತ್ಯುತ್ತಮ ವಿಷಯಗಳಿಂದ ಕಂಗೊಳಿಸುತ್ತಿದೆ. ಅದನ್ನು ಓದುವುದೇ ಒಂದು ಸಂತೋಷದ ಅನುಭವ. ಇಂತಹ ಉತ್ತಮ ಮಾಸಿಕಕ್ಕಾಗಿ, ಸದಭಿರುಚಿಯ ಓದುಗರು ನಿಮಗೆ ಸದಾ ಕೃತಜ್ಞರಾಗಿರುತ್ತಾರೆ.**—ಕುಮಾರಿ ಆರತಿ ಬಾಲಸುಬ್ರಹ್ಮಣ್ಯಂ, ಬೆಂಗಳೂರು.**

## ಇನ್ನೂ ಹೆಚ್ಚಿನ ಮಾರ್ಗದರ್ಶನ ಬಯಸುತ್ತೇವೆ

ವಿವೇಕಪ್ರಭ ಪತ್ರಿಕೆ ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. ನಾವು, ಯುನೆಸ್ಕೋ ಕ್ಲಬ್‌ನ ಸದಸ್ಯರು, ಪ್ರತಿ ಭಾನುವಾರ ಒಂದೆಡೆ ಸೇರಿ ದೇಶ ವಿದೇಶಗಳ ಪ್ರಮುಖ ದಿನಾಚರಣೆಗಳನ್ನು, ಉತ್ತಮ ಪುಸ್ತಕಗಳನ್ನು, ಒಳ್ಳೆಯ ಹವ್ಯಾಸ ಬೆಳೆಸುವ ಕುರಿತು ಚರ್ಚೆ ನಡೆಸುತ್ತೇವೆ. ವಿವೇಕಪ್ರಭ ಪತ್ರಿಕೆಯ ಕೆಲವು ಲೇಖನಗಳನ್ನು ಈ ಸಂದರ್ಭದಲ್ಲಿ ಗಟ್ಟಿಯಾಗಿ ಓದಿ ಚರ್ಚಿಸುತ್ತೇವೆ ಕೂಡ. ತಾವುಗಳು ವ್ಯಕ್ತಿತ್ವ ವಿಕಾಸ ಕುರಿತಂತೆ ಬರೆದ ಲೇಖನಗಳನ್ನು ನಮ್ಮ ಸದಸ್ಯರೆಲ್ಲರೂ ಮೆಚ್ಚಿದ್ದಾರೆ. ಇನ್ನೂ ಹೆಚ್ಚಿನ ಮಾರ್ಗದರ್ಶನ ಬಯಸಿದ್ದಾರೆ.

**— ಬೇದ್ರೆ ಎಸ್. ಮಂಜುನಾಥ, ಚಿತ್ರದುರ್ಗ**

## ಮನಸ್ಸಿಗೆ ನೆಮ್ಮದಿ

'ವಿವೇಕಪ್ರಭ' ಓದಲು ಪ್ರಾರಂಭಿಸಿದಾಗಿನಿಂದ ನನ್ನ ಮನಸ್ಸಿಗೆ ನೆಮ್ಮದಿ ಸಿಗುತ್ತಿದೆ. ಇದರಲ್ಲಿ ಎಂತಹ ಉತ್ತಮ ವಿಚಾರಗಳಿವೆ!

**—ಎ. ಶ್ರೀಕಂಠಯ್ಯ, ಬೆಂಗಳೂರು**

## ಪ್ರಭಾವಕ್ಕೆ ಒಳಗಾಗಿದ್ದು, ಅಭಿಮಾನಿಯೂ ಆಗಿದ್ದೇನೆ

ಸ್ವಾಮಿ, ನಾನು ಎಸ್. ಶಿವಪ್ಪ ನಿಮ್ಮ ವಿವೇಕಪ್ರಭ ಮಾಸಪತ್ರಿಕೆಯನ್ನು ಒಂದು ವರ್ಷದಿಂದ ಸಂತೋಷದಿಂದ ಸ್ವೀಕರಿಸುತ್ತಿದ್ದು ಇದರ ಪ್ರಭಾವಕ್ಕೆ ಒಳಗಾಗಿದ್ದು, ಅಭಿಮಾನಿಯೂ ಸಹ ಆಗಿದ್ದೇನೆ. ನಿಮ್ಮಲ್ಲಿ ಪ್ರಕಟಿಸುವ ವಿಷಯಗಳು ಆದ್ಯಾತ್ಮಿಕ ಮತ್ತು ದೈವಿಕ ಮತ್ತು ಲೌಕಿಕ ಚಿಂತನೆಗಳನ್ನೊಳಗೊಂಡಿದ್ದು ಇದರಲ್ಲಿ ಪರಿಪೂರ್ಣವಾಗಿ ತಲ್ಲೀನನಾಗಿದ್ದೇನೆ.

ತಾವುಗಳು ಸಮಾಜದ ಏಳಿಗೆಗಾಗಿ ಕೈಗೊಂಡಿರುವ ಕಾರ್ಯಕ್ರಮಗಳು, ನಡೆಸುತ್ತಿರುವ ಸೇವಾ ಸಂಸ್ಥೆಗಳು ಮತ್ತು ಯುವಜನತೆಗೆ ತಲುಪಿಸುತ್ತಿರುವ ಸ್ವಾಮಿ ವಿವೇಕಾನಂದರ ವಾಣಿಗಳು ನಿಜವಾಗಿಯೂ ಅತಿ ಅಭೂತಪೂರ್ವವಾದವುಗಳು. ಆದ್ದರಿಂದ ನಿಮ್ಮನ್ನೂ ಮತ್ತು ಈ ಕಾರ್ಯದಲ್ಲಿ ಸಹಭಾಗಿಗಳಾಗಿರುವ ಎಲ್ಲರನ್ನೂ ಅಭಿನಂದಿಸುತ್ತಾ ನಿಮ್ಮ ಈ ಕಾರ್ಯಗಳು ಹೀಗೆ ಮುಂದುವರಿಯಲೆಂದು ಹಾರೈಸುತ್ತೇನೆ. —ಶಿವಪ್ಪ. ಎಸ್. ಬೆಂಗಳೂರು

## ಅನ್ವರ್ಥನಾಮಧೇಯ

'ಯಾರ ಮನಸ್ಸು ವಿವೇಕದಿಂದ ಹುಟ್ಟುವ ಆನಂದದಲ್ಲಿಯೇ ಮುಳುಗಿರುವುದೊ, ವಿವೇಕವನ್ನು ಇತರರಿಗೆ ದಾನಮಾಡಿ ಅದರಲ್ಲಿ ವಿನೋದ ಪಡುವ ಸ್ವಭಾವವು ಯಾರದೋ, ವಿವೇಕವೆಂಬ ಬೆಳಕಿನಿಂದ ಸುಂದರ ಕಾಂತಿಯನ್ನು ಯಾರು ಹೊಂದಿರುವರೋ, ಅಂತಹ ವಿವೇಕಾನಂದರನ್ನು ನಮಿಸುತ್ತೇನೆ' ಎಂದು ತಮ್ಮ ನಾಯಕರೂ ಗುರುಭಾಯಿಗಳೂ ಆದ ವಿವೇಕಾನಂದ ಸ್ವಾಮಿಗಳನ್ನು ಕುರಿತು ಕೊಂಡಾಡಿದ್ದಾರೆ ಸ್ವಾಮಿ ರಾಮಕೃಷ್ಣಾನಂದಜೀ ಅವರು. ಅಂತಹ ಪುಣ್ಯಪುರುಷರ ನಾಮಧೇಯವನ್ನು ಹೊತ್ತು ಹೊರಹೊಮ್ಮಿರುವ, ಶ್ರೀ ರಾಮಕೃಷ್ಣಾಶ್ರಮ ಮೈಸೂರಿನಿಂದ ಬಿಡುಗಡೆಯಾಗುತ್ತಿರುವ ವಿವೇಕಪ್ರಭ ನಿಜಕ್ಕೂ ಅನ್ವರ್ಥನಾಮಧೇಯವೆನಿಸಿಕೊಂಡಿದೆ. ತಮ್ಮ ನಿಜಸ್ವರೂಪದ ಅರಿವನ್ನೂ, ಜ್ಞಾನವನ್ನೂ, ಆಬಾಲ ವೃದ್ಧರಿಗೂ ಅರ್ಥವಾಗುವಂತೆ ವಿವೇಕಪ್ರಭ ತನ್ನ ಬೆಳಕಿನಿಂದ ಎಲ್ಲರ ಚೇತನಗಳನ್ನೂ ಬೆಳಗುತ್ತಿದೆ. ನನ್ನ ಆಶಯವೇನೆಂದರೆ, ಇನ್ನೂ ಹೆಚ್ಚು ಹೆಚ್ಚು ಶ್ರೀರಾಮಕೃಷ್ಣ-ಶಾರದಾ-ವಿವೇಕಾನಂದರ ದಿವ್ಯಜೀವನ ಉಪದೇಶಗಳು ಬೆಳಕಿಗೆ ಬರಲಿ. ಯುಗಾವತಾರರ ಅವತರಣ, ಸಂದೇಶ ಎಲ್ಲಾ ಕಡೆಗೂ ತಲುಪಲಿ, ಅವರ ದಿವ್ಯ ಸಂದೇಶಗಳನ್ನು ಅರಿತು ಆಚರಿಸಿ ಪ್ರತಿಯೊಬ್ಬರೂ ತಮ್ಮ ಸರ್ವತೋಮುಖ ಪ್ರಗತಿಯನ್ನು ಹೊಂದಲಿ ಎಂಬುದೇ ಆಗಿದೆ. —ಕುಮಾರಿ ಮೀನಾ ವಿ. ಬೆಂಗಳೂರು

# ಗಂಟುಮೂಟೆ

ನನಗೆ ಪ್ರಯಾಣಕ್ಕೆ ಮೊದಲು ಬಹು ಮುಖ್ಯವಾದ ವಿಷಯ, ಏನನ್ನು ಪೆಟ್ಟಿಗೆಯಲ್ಲಿ ಗಂಟು ಮೂಟೆ ಕಟ್ಟುವುದು ಎನ್ನುವುದೇ. ಎಲ್ಲೆಲ್ಲಿಗೆ ಹೋಗುವುದು, ಏನೇನು ಕಾಗದ ಪತ್ರ ತೆಗೆದುಕೊಳ್ಳುವುದು, ನನ್ನ ಮನೆಯಲ್ಲಿ ಮತ್ತು ನನ್ನ ಕಛೇರಿಯಲ್ಲಿ ನಾನಿಲ್ಲದಾಗ ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕು—ಇದ್ಯಾವುದೂ ನನ್ನ ಮನಸ್ಸಿಗೆ ಅಷ್ಟು ಕಷ್ಟಕರವೆನಿಸುವುದಿಲ್ಲ—ಏನನ್ನು ಗಂಟು ಮೂಟೆ ಕಟ್ಟುವುದು, ಎನ್ನುವುದನ್ನು ಬಿಟ್ಟು.

'ನಮ್ಮ ಜೀವನದ ಪ್ರಯಾಣವನ್ನೇ ನಾವು ಅವಲೋಕಿಸಿದರೆ!'

ನಮ್ಮ ಜೀವನದಲ್ಲಿ ಜೀವನದುದ್ದಕ್ಕೂ ಹಲವಾರು ಏರಿಳಿತಗಳೂ, ಹಲವಾರು ಬದಲಾವಣೆಗಳೂ, ಮತ್ತೆ ಸಹಸ್ರಾರು ಅನಿರೀಕ್ಷಿತ ತರತರಹದ ಸಮಸ್ಯೆಗಳೂ ನಮ್ಮನ್ನು ಎದುರಿಸುತ್ತವೆ.

ಈ ಎಲ್ಲ ಜಟಿಲವಾದ ಸಮಸ್ಯೆಗಳನ್ನು ನಾವು ಯಾವಾಗಲೂ ನಮ್ಮ ಜತೆಯಲ್ಲಿಯೇ ತೆಗೆದುಕೊಂಡು ಹೋಗುವ ಪ್ರಯತ್ನ ಮಾಡಿದರೆ ಆ ಭಾರಕ್ಕೆ ನಾವು ಮುಂದೆ ಹೆಜ್ಜೆ ಇಡಲೂ ಸಾಧ್ಯವೇ ಆಗುವುದಿಲ್ಲ. ಈ ಕಾರಣಕ್ಕಾಗಿಯೆ ನಮ್ಮ ಜೀವನದ ಪ್ರಯಾಣದಲ್ಲಿ 'ಗಂಟುಮೂಟೆ' ಆದಷ್ಟು ಕಡಿಮೆ ಇರಬೇಕು.

ನಾವು ಗಂಟುಮೂಟೆ ಕಟ್ಟಬೇಕಾಗಿರುವುದು ಸಿಹಿಯಾದ ನೆನಪುಗಳು, ಸುಂದರವಾದ ಸನ್ನಿವೇಶಗಳು, ನಗೆ ಮಂದಹಾಸ. ಇವುಗಳೆಲ್ಲವೂ ಕಷ್ಟದ ಸಮಯದಲ್ಲಿ ನಮ್ಮ ಸಹಾಯಕ್ಕೆ ಬರುತ್ತವೆ. ಕಹಿ ಅನುಭವಗಳನ್ನು ಹಿಂದೆಯೇ ಬಿಡಬೇಕು—ಅವುಗಳು ಯಾವುದಕ್ಕೂ ಪ್ರಯೋಜನಕಾರಿಯಾಗುವುದಿಲ್ಲ.

ಸಿಟ್ಟು ಮತ್ತು ಅಸಮಾಧಾನದಿಂದ ದೂರಪ್ರಯಾಣ ಬಲು ಕಷ್ಟ—ಅವುಗಳು ಬಲು ಹೆಚ್ಚಿನ ಸ್ಥಳವನ್ನು ಆಕ್ರಮಿಸಿಕೊಳ್ಳುತ್ತವೆ.

ನೀವು ವಿಮಾನದಲ್ಲಿ ವಿಹಾರ ಮಾಡಬೇಕಿದ್ದಲ್ಲಿ, ಭಯ ಮತ್ತು ಅನುಮಾನ ಹಿಂದೆಯೇ ಬಿಡಿ. ಅವುಗಳು ಸೀಸದ ಥರ ಬಲು ಭಾರ ಮತ್ತು ಬಲು ಎತ್ತರ ಹಾರಲು ಸಾಧ್ಯವಾಗುವುದಿಲ್ಲ.

ನಿಮ್ಮ ಮೊದಲ-ಚಿಕಿತ್ಸೆ-ಪೆಟ್ಟಿಗೆಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಪ್ರೀತಿ ವಿಶ್ವಾಸವನ್ನು ತುಂಬಿ. ಅದರ ಜೊತೆಗೆ ಸ್ನೇಹ, ಸೌಹಾರ್ದ್ಯ, ನಗೆಯನ್ನೂ ಸೇರಿಸಿ. ಇವುಗಳು ಮುಂದೆ ಬರಬಹುದಾದ ನೋವುಗಳಿಗೆ ಔಷಧಿಯಾಗಬಹುದು.

ನಿರಾಶಾವಾದ ಕೆಲವು ಸಮಯ ಉಪಯೋಗಕ್ಕೆ ಬರಬಹುದು—ಆದರೆ ಅದನ್ನು ನೀವು ಸರಿಯಾಗಿ ಎದುರಿಸಬಲ್ಲವರಾದರೆ ಮಾತ್ರ ನಿಮ್ಮ ಹತ್ತಿರವಿರಲಿ. ನಿಮ್ಮ ಪೆಟ್ಟಿಗೆಯ ನಾಲ್ಕು ಮೂಲೆಗಳಲ್ಲಿಯೂ ಆಶಾವಾದವನ್ನು ತುಂಬಿರಿ ಮತ್ತು ನಿಮ್ಮ ತಣ್ಣನೆಯ ಕಪ್ಪುಬಣ್ಣದ ಕನ್ನಡಕವನ್ನು ಮರೆಯದೆ ತನ್ನಿ. ಅದು ಜೀವನವನ್ನು ಸುಂದರ ಬಣ್ಣಗಳಲ್ಲಿ ನೋಡಲು ಸಹಾಯವಾಗುತ್ತದೆ.

ಈಗ ಈ ತಯಾರಿಯ ಜತೆ, ನೀವು ಜೀವನದ ಪ್ರಯಾಣಕ್ಕೆ ಸಿದ್ಧವಾಗಿರುವಿರಿ—ನಿಮ್ಮ ಪೆಟ್ಟಿಗೆಯ ತುಂಬ ಸುಂದರ ಆಶೆಗಳೊಂದಿಗೆ.

'ನಿಮ್ಮ ಜೀವನ ಪ್ರಯಾಣ ಸುಖವಾಗಿರಲಿ'

ಮೂಲ: **ಪೇಪರ್ ಕ್ರೈಸ್ (Paper Cries), ಕಾರ್‌ಮಿನಾ ಸಿಸ್‌ನಿರೋಸ್‌ರಿಂದ (Carmina Cisneros) ಕನ್ನಡಕ್ಕೆ** ಅನುವಾದ : 'ಸಂತ ದೀಪ'